ಶ್ರೀ ಪಿ. ಎನ್. ರೆಡ್ಡಿ—ಇದನ್ನು ಸಿ.ಐ.ಡಿ.ಗೆ ರೆಫರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಪ್ಪ—ಅದರ ಅಗತ್ಯತೆ ಕಂಡುಬಂದರೆ ಅದೆಲ್ಲ ಕ್ರಮಗಳನ್ನು ಅವಶ್ಯಕವಾಗಿ ತೆಗೆದು ಕೊಳ್ಳುತ್ತೇನೆ.

Nationai Rural Water Supply Scheme to Amrutur Village in Kunigal Taluk.

668. SRI D. T. MAYANNA(Huliyurdurga) — Will the Minister for Rural Development and Panchayati Raj be pleased to state:—

(*a*) whether it has come to the notice of the Government that hardship is caused to the people of Amruthur village, Kunigal taluk of Tumkur district due to the paucity of drinking water:

(*b*) since when the Amruthur Village Panchayat has paid their contribution for getting water under National Rural Water Supply Scheme;

(*c*) whether the Government would take immediate action to provide water to this village under the said scheme ?

SRI K. PRABHAKAR (Minister for Rural Development and Panchayati Raj).—

(*a*) Yes.

(*b*) About one year.

(*c*) Yes.

ಶ್ರೀ ಡಿ. ಟಿ. ಮಾಯಣ್ಣ ಸ್ವಾಮಿ, ತುಮಕೂರು ಜಿಲ್ಲಾ ಕುಣಿಗಲ್ ತಾಲ್ಲೂಕ್ ಅಮೃತೂರು ಗ್ರಾಮದಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ಎಂದು ಕೇಳಿದ್ದಕ್ಕೆ ಬಂದಿರುತ್ತದೆ ಎಂದು ಹೇಳಿರುತ್ತೀರಿ, ಆದರೆ ಈ ಅಮೃತೂರು ಅಚ್ಚುಕಟ್ಟಿನಲ್ಲಿ ವರ್ಷ ವರ್ಷ ಬಹಳ ತಡವಾಗಿ ಮಳೆಯಾಗುತ್ತಿರುವ ಕಾರಣ ಅಲ್ಲಿ ನೀರಿನ ವ್ಯವಸ್ಥೆಗೆ ತೊಂದರೆಯಾಗಿರುತ್ತದೆ. ಆದ್ದರಿಂದ ತಾವು ಅದಕ್ಕೆ ಏನಾದರೂ ಕಾರ್ಯಕ್ರಮವನ್ನು ಹಾಕಿ ಕೊಂಡಿರುತ್ತೀರಾ ಎಂದು ಕೇಳುತ್ತೇನೆ.

† ಶ್ರೀ ಕೆ. ಪ್ರಭಾಕರ್—ಕಾರ್ಯಕ್ರಮವನ್ನು ಹಾಕಿಕೊಂಡಿರುತ್ತೇವೆ.

ಶ್ರೀ ಡಿ.ಟಿ ಮಾಯಣ್ಣ—ಏನು ಕಾರ್ಯಕ್ರಮವೆಂದು ಕೇಳುತ್ತೇನೆ ?.

ಶ್ರೀ ಕೆ; ಪ್ರಭಾಕರ್—ಅಲ್ಲಿರತಕ್ಕಂಥ ಪಂಚಾಯತಿ ಈ ವಿಷಯದ ಬಗ್ಗೆ ವರ್ಷ ವರ್ಷ ಹೇಳುತ್ತಲೇ ಬರುತ್ತಿದೆ. ಅಮೃತೂರು ಬಡಾವಣೆ, ನೀರಿನ ವ್ಯವಸೆ , ರಸ್ತೆ ರಿಪೇರಿ ಇವೇ ಮುಂತಾದ ಕೆಲಸ ಕಾರ್ಯಗಳಿಗೆ ಇಂತಿಷ್ಟು ಹಣದ ಅವಶ್ಯಕತೆ ಇರುತ್ತದೆಂದು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದೆ. ಇದು ನಮ್ಮ ವರ್ಕ್ ಲಿಸ್ಟಿನಲ್ಲಿ ಸೇರಿರುತ್ತದೆ. ಈ ವರ್ಷ ಅಲ್ಲಿಗೆ ಬೇಕಾದ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಡಿ. ಟಿ. ಮಾಯಣ್ಣ—ಸ್ವಾಮಿ ಒಂದು ವರ್ಷದಿಂದ ಹಣವನ್ನು ಕೊಟ್ಟಿಲ್ಲ. ಹಣವನ್ನು ಬೇಡಿ ಅಧಿಕಾರಿಗಳು ಮನವಿಯನ್ನು ಕಳುಹಿಸಿಕೊಟ್ಟಿದ್ದಾರೆ ಇದರ ಬಗ್ಗೆ ತಾವು ಏನು ಕ್ರಮ ತೆಗೆದು ಕೊಂಡಿರುತ್ತೀರಿ ?,

ಶ್ರೀ ಕೆ. ಪ್ರಭಾಕರ್—ಪ್ರತಿವರ್ಷವೂ ಹಣವನ್ನು ಬೇಡತಕ್ಕಂಥ ನೂರಾರು ಕೇಸ್‌ಗಳು ಇರುತ್ತವೆ. ನಾವು ಅದನ್ನು ಪ್ರೇಯಾರಿಟಿ ಬೇಸಿಸ್‌ಮೇಲೆ ಎಸ್ಟಿಮೇಟ್ ಮಾಡಿ ಕೆಲಸವನ್ನು ತೆಗೆದುಕೊಳ್ಳುವುದು ಇರುತ್ತದೆ. ನಿಮ್ಮ ಭಾಗದ ಕೆಲಸವನ್ನು ಕೂಡಲೇ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇನೆ.

ಶ್ರೀ ಡಿ. ಟಿ, ಮಾಯಣ್ಣ—ಎಷ್ಟು ದಿವಸದಲ್ಲಿ ಈ ಕೆಲಸ ಕೈಗೊಳ್ಳುತ್ತೀರಿ ?

ಶ್ರೀ ಕೆ. ಪ್ರಭಾಕರ್—ಇಷ್ಟು ದಿವಸದಲ್ಲಿಯೇ ಎಂದು ಹೇಳುವುದಕ್ಕೆ ಬರುವುದಿಲ್ಲ. ಈ ವರ್ಷದಲ್ಲಿ ಮುಗಿಸುತ್ತೆವೆಂದು ಹೇಳುತ್ತೇನೆ.

Varalakshmi Cotton Seeds distributed at Hassan District.

715 SRI K. B. MALLAPPA (Arakalgud)— Will the Minister for Agriculture and Parlimentary Affairs be pleased to state :—

(*a*) the quantity of Varalakshmi cotton seeds distributed by the Seed Corporation through the Agriculture Department (Deputy Director of Agriculture. Hassan) in Hassan Distrits ;

(*b*) whether the seed so distributed was of good quality certified by the Seed Corporation ;

(*c*) the numbers of acres land in which these seeds were sown in Hassan District ;

(*d*) whether the Government is aware that the seeds did not germinate and the ryots were put to great loss ;

(*e*) whether the Government intend to take action on the Officers responsible ?

SRI K. H. RANGANATH(Minister for Agriculture and Parliamentary Affairs)—

(*a*) During 1978-79, 3,050 kgs. of Varalakshmi cotton seeds have been distributed in Hassan District.

(*b*) Yes. The seeds were certified by the Department of Agriculture.

(*c*) 1,893 acres.

(*d*) Only one complaint was received. There will be no loss since the farmer has, on the advice of the Department of Agriculture, filled up the gaps by fresh dibbling.

(*e*) Does not arise in view of the item (d) above.

ಶ್ರೀ ಕೆ. ಬಿ. ಮಲ್ಲಪ್ಪ—ಸ್ವಾಮಿ ೩ ಮತ್ತು ೪ನೇ ಪ್ರಶ್ನೆಗೆ ಉತ್ತರವಾಗಿ ಯಾರಿಂದಲೂ ಕಂಪ್ಲೇಂಟ್ ಬಂದಿಲ್ಲವೆಂದು ಹೇಳಿದ್ದೀರಿ. ನಮ್ಮ ಅರಕಲಗೂಡು ತಾಲ್ಲೂಕಿನಲ್ಲಿ ಸುಮಾರು ಐನೂರು ಆರುನೂರು ಎಕರೆಗಳಲ್ಲಿ ಬೀಜ ಬಿತ್ತಿದ್ದರಲ್ಲಿ, ಸುಮಾರು ಅರ್ಧಭಾಗಕ್ಕಿಂತಲೂ ಹೆಚ್ಚಿಗೆ ಬೀಜ ಹುಟ್ಟಿಲ್ಲ. ಆದ್ದರಿಂದ ತಾವು ಬೀಜವನ್ನು ವಿತರಣೆ ಮಾಡುವಾಗ ಟೆಸ್ಟ್‌ಮಾಡಿ ಬೀಜ ವಿತರಣೆ ಮಾಡುತ್ತೀರಾ ಎಂದು ಕೇಳುತ್ತೇನೆ ?,